13 May 2026

To,

BSE Limited
Phiroze Jeejeebhoy Towers,
Dalal Street,
Mumbai- 400 001
Scrip Code: 543260

National Stock Exchange of India Ltd.
Exchange Plaza, Plot no. C/1, G Block,
Bandra-Kurla Complex
Bandra (E), Mumbai - 400 051
NSE Symbol: STOVEKRAFT

Dear Sir/Madam,

**Sub: Newspaper Publication**

Please find enclosed herewith copies of newspaper publication of Standalone Audited Financial Results for the quarter and financial year ended 31 March 2026 published in the following newspapers:

1. Vijay Karnataka (Regional Newspaper) on 13 May 2026.
2. Business Line (National Newspaper) on 13 May 2026.

Kindly take the same on the record.

Thanking you,

Yours faithfully
For Stove Kraft Limited

SHRINIVAS PRANESHACHARYA HARAPANAHALLI

Digitally signed by SHRINIVAS PRANESHACHARYA HARAPANAHALLI
Date: 2026.05.13 13:27:50 +05'30'

Shrinivas P Harapanahalli
Company Secretary & Compliance Officer

ರೈಲ್ವೆ ನೇಮಕದಲ್ಲಿ ಕನ್ನಡಿಗರಿಗೆ ಆದ್ಯತೆಗೆ ಆಗ್ರಹ | ಮುಂಬಡ್ತಿ ಪರೀಕ್ಷೆಯಲ್ಲಿ ಕನ್ನಡ ಭಾಷೆಗೆ ಅವಕಾಶಕ್ಕೆ ಒತ್ತಾಯ

# ಹುಬ್ಬಳ್ಳಿ ರೈಲು ಸೌಧಕ್ಕೆ ಕರವೇ ಮುತ್ತಿಗೆ

■ **ವಿಕ ಸುದ್ದಿಲೋಕ** ಹುಬ್ಬಳ್ಳಿ

ರೈಲ್ವೆ ನೇಮಕಾತಿ, ಮುಂಬಡ್ತಿ ಪರೀಕ್ಷೆಗಳಲ್ಲಿ ಕನ್ನಡ ಭಾಷೆಗೆ ಅವಕಾಶ ನೀಡುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಕುಮಾರ ಶೆಟ್ಟಿ ಬಣ)ದ ಕಾರ್ಯಕರ್ತರು ಮಂಗಳವಾರ ನಗರದ ರೈಲು ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

''ರೈಲ್ವೆಯಲ್ಲಿ ಮೊದಲಿನಿಂದಲೂ ಕನ್ನಡಿಗ ಅಭ್ಯರ್ಥಿಗಳು ಮತ್ತು ನೌಕರರಿಗೆ ಅನ್ಯಾಯ ಆಗುತ್ತಲೇ ಬಂದಿದೆ. ರೈಲ್ವೆ ಇಲಾಖೆಯಲ್ಲಿ ಕನ್ನಡಿಗರಿಗೆ ಸಮಾನ ಅವಕಾಶಗಳು ದೊರೆಯುತ್ತಿಲ್ಲ, ರೈಲ್ವೆ ನೇಮಕಾತಿ, ಬಡ್ತಿ ಪರೀಕ್ಷೆಯಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಮಾತ್ರ ಅವಕಾಶ ನೀಡಲಾಗಿದೆ. ಇದರಿಂದ ಕನ್ನಡಿಗ ಅಭ್ಯರ್ಥಿಗಳು ವಿವಿಧ ಹುದ್ದೆಗಳಲ್ಲಿ ಮುಂಬಡ್ತಿ ಪಡೆಯದೇ ತೊಂದರೆಗೆ ಒಳಗಾಗಿದ್ದಾರೆ. ಮಾತೃಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು,'' ಎಂದು ಒತ್ತಾಯಿಸಿದರು.

''ಮುಂಬರುವ ಎಲ್ಲ ನೇಮಕಾತಿ ಅಧಿಸೂಚನೆಗಳನ್ನು ಕನ್ನಡದಲ್ಲಿ ನೀಡಬೇಕು. ಅರ್ಜಿ, ಸೇವಾ ನಿಯಮಗಳು ಹಾಗೂ ತರಬೇತಿ ಮಾಹಿತಿಯನ್ನು ಕನ್ನಡದಲ್ಲಿ ಒದಗಿಸಬೇಕು. ಹಿಂದಿ ಬಳಕೆಗೆ ಒತ್ತಡ ಹೇರಬಾರದು. ರೈಲ್ವೆ ಇಲಾಖೆಯಲ್ಲಿ ಕನ್ನಡ ಭಾಷೆಯ ಬಳಕೆಯ ಕುರಿತು ಪರಿಶೀಲನಾ ಸಮಿತಿ ರಚಿಸಬೇಕು. ರೈಲ್ವೆ ನೇಮಕಾತಿಯಲ್ಲಿ ಸ್ಥಳೀಯ ರಾಜ್ಯಗಳಿಗೆ ಶೇ.75ರಷ್ಟು ನೇಮಕಾತಿ ಮಾಡಿಕೊಳ್ಳಬೇಕು. ಭಾಷಾ ಆಧಾರಿತ ಭೇದಭಾವದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು,'' ಎಂದು ಆಗ್ರಹಿಸಿದರು.

''ರೈಲ್ವೆ ಇಲಾಖೆಯ ಬಡ್ತಿ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಕನ್ನಡಕ್ಕೆ ಅವಕಾಶ ನೀಡಬೇಕು. ಅವಕಾಶ ನೀಡದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು,'' ಎಂದು ಎಚ್ಚರಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಪಿ.ಅನಂತ ಮಾತನಾಡಿ, ''ಕನ್ನಡದ ಬಗ್ಗೆ ನಮಗೂ ಅಭಿಮಾನ ವಿದೆ. ಉಳಿದ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಲಾಗುತ್ತಿದೆ. ಬಡ್ತಿ ಪರೀಕ್ಷೆಗಳಲ್ಲೂ ಕನ್ನಡ ಬಳಕೆ ಕುರಿತು ಹಿರಿಯ ಅಧಿಕಾರಿಗಳಿಗೆ ಕಳಿಸಲಾಗುವುದು,'' ಎಂದು ಭರವಸೆ ನೀಡಿದರು.

ಕರವೇ ಧಾರವಾಡ ಜಿಲ್ಲಾ ಅಧ್ಯಕ್ಷ ಮಂಜುನಾಥ ಲೂತಿಮಠ, ಕರವೇ ಬೆಳಗಾವಿ ವಿಭಾಗೀಯ ಅಧ್ಯಕ್ಷ ಪಾಪು ಧಾರೆ, ಬಸವರಾಜ ತಾಳಿಕೋಟಿ, ಬಾಗಲಕೋಟೆ ಜಿಲ್ಲಾಧ್ಯಕ್ಷ ಮುತ್ತು ಅರಗಿಣಿ ಶೆಟ್ಟಿ, ಹಾವೇರಿ ಜಿಲ್ಲಾಧ್ಯಕ್ಷ ಮಂಜುನಾಥ ವಾಲಿಕಾರ, ಗದಗ ಜಿಲ್ಲಾಧ್ಯಕ್ಷ ತಿಮ್ಮಣ್ಣ ದೋಣಿ, ಉತ್ತರ ಕನ್ನಡ ಜಿಲ್ಲಾಧ್ಯಕ್ಷ ಅಕ್ಷಯ ಸೇರಿದಂತೆ ಅನೇಕರಿದ್ದರು.


**ಹುಬ್ಬಳ್ಳಿಯಲ್ಲಿ ರೈಲ್ವೆ ನೇಮಕಾತಿ, ರೈಲ್ವೆ ಮುಂಬಡ್ತಿ ಪರೀಕ್ಷೆಗಳಲ್ಲಿ ಕನ್ನಡ ಭಾಷೆಗೆ ಅವಕಾಶ ನೀಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಕುಮಾರ ಶೆಟ್ಟಿ ಬಣ) ಕಾರ್ಯಕರ್ತರು ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.**

# ಶಿವಮೊಗ್ಗ ಜಿಲ್ಲೆ ವಿಕ ಸೂಪರ್ ಸ್ಟಾರ್ ರೈತರು




**ಶಿವಮೊಗ್ಗ ಜಿಲ್ಲೆ ಹೊಸನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ವಿಕ ಸೂಪರ್ ಸ್ಟಾರ್ ರೈತ ಸಮಾರಂಭದಲ್ಲಿ ತೀರ್ಥಹಳ್ಳಿಯ ಸಚಿನ್, ಸಾಗರದ ಎಂ.ಡಿ. ಅಮೋಘ, ಸೊರಬದ ಟಿ.ಎಂ.ಈರಪ್ಪ ನಾಯ್ಕ್, ಶಿಕಾರಿಪುರದ ಗೋಪಮ್ಮ ಚನ್ನಪ್ಪ, ಹೊಸನಗರದ ನಾಗಭೂಷಣ್ ಭಟ್ ಅವರಿಗೆ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಂಎಡಿಬಿ ಅಧ್ಯಕ್ಷ ಡಾ. ಆರ್.ಎಂ. ಮಂಜುನಾಥ್ ಗೌಡ, ಶಿಮುಲ್ ಅಧ್ಯಕ್ಷ ವಿದ್ಯಾಧರ, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ವಾಟಗೋಡು ಸುರೇಶ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸಚಿನ್ ಹೆಗಡೆ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪುಟ್ಟಾನಾಯ್ಕ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಸಂಶೋಧನಾ ನಿರ್ದೇಶಕ ಡಾ. ಎಸ್. ಶ್ರೀಧರ್, ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ. ನಾರಾಯಣ ಎಸ್. ಮಾವರ್ಕರ್ ಇದ್ದರು.**




# ಪ್ರಧಾನಿ ಮೋದಿ ಕರೆಗೆ ಮಲಬಾರ್ ಗೋಲ್ಡ್ ಬೆಂಬಲ

**ಮುಂಬಯಿ:** ಜವಾಬ್ದಾರಿಯುತ ಚಿನ್ನದ ಬಳಕೆ ಹಾಗೂ ದೇಶೀಯ ಚಿನ್ನದ ಸಂಪನ್ಮೂಲಗಳ ಸದ್ಬಳಕೆ ಮೂಲಕ ಭಾರತದ ಆರ್ಥಿಕ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವ ಪ್ರಧಾನಿ ನರೇಂದ್ರ ಮೋದಿಯವರ ಕರೆಗೆ ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಈ ನಿಟ್ಟಿನಲ್ಲಿ ಚಿನ್ನ ನಗದೀಕರಣ ಯೋಜನೆ (ಜಿಎಂಎಸ್) ಕಾರ್ಯತಂತ್ರದ ಸುಧಾರಣೆಗಳನ್ನು ಶಿಫಾರಸು ಮಾಡುವ ಸಮಗ್ರ ಪ್ರಸ್ತಾವನೆಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದೆ.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರಿಗೆ ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹಮ್ಮದ್ ಅವರು ಸಲ್ಲಿಸಿದ ಈ ಪ್ರಸ್ತಾವನೆಯು, ಜಿಎಂಎಸ್‌ನಲ್ಲಿ ಸಾರ್ವಜನಿಕ ಸಹಭಾಗಿತ್ವ ಹೆಚ್ಚಿಸಲು, ಮನೆಯಲ್ಲಿರುವ ಬಳಕೆಯಾಗದ ಚಿನ್ನವನ್ನು ಚಲಾವಣೆಗೆ ತರಲು ಹಾಗೂ ದೇಶದೊಳಗೆ ಅಸ್ತಿತ್ವದಲ್ಲಿರುವ ಚಿನ್ನದ ಮರುಬಳಕೆ ಹಾಗೂ ಚಲಾವಣೆಯನ್ನು ಉತ್ತೇಜಿಸಲು ಪ್ರಾಯೋಗಿಕ ಕ್ರಮಗಳನ್ನು ರೂಪಿಸಿದೆ.


ಭಾರತವು ವಾರ್ಷಿಕ ಸುಮಾರು 700-800 ಟನ್ ಚಿನ್ನ ಆಮದು ಮಾಡಿಕೊಳ್ಳುತ್ತಿದ್ದು, ಇದರಿಂದಾಗಿ ವಿದೇಶಿ ವಿನಿಮಯದ ಮೇಲೆ ಭಾರಿ ಒತ್ತಡ ಸೃಷ್ಟಿಯಾಗಿ ಚಾಲ್ತಿ ಖಾತೆ ಕೊರತೆ ಉಂಟಾಗುತ್ತಿದೆ. ಕುಟುಂಬಗಳು ಮತ್ತು ಸಂಸ್ಥೆಗಳು ಅಂದಾಜು 25,000ದಿಂದ 35,000 ಟನ್ ಚಿನ್ನವನ್ನು ಆಭರಣ, ನಾಣ್ಯ ಮತ್ತು ಗಟ್ಟಿ ರೂಪದಲ್ಲಿ ಇಟ್ಟುಕೊಂಡಿವೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಹೆಚ್ಚಿನ ಪಾಲು ಆರ್ಥಿಕವಾಗಿ ಬಳಕೆಯಾಗದೆ ಉಳಿದಿದೆ.

''ದೇಶೀಯವಾಗಿ ಲಭ್ಯವಿರುವ ಚಿನ್ನದ ಮರುಬಳಕೆ, ವಿನಿಮಯ ಮತ್ತು ನಗದೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡುವುದರಿಂದ ಆಮದು ಅವಲಂಬನೆಯನ್ನು ಕಡಿಮೆ ಮಾಡಬಹುದು. ಡಾಲರ್ ಹೊರಹರಿವನ್ನು ಮಿತಿಗೊಳಿಸಬಹುದು ಮತ್ತು ದೀರ್ಘಾವಧಿಯಲ್ಲಿ ದೇಶದ ಆರ್ಥಿಕತೆಯನ್ನು ಬಲಪಡಿಸಲು ಇದು ಪ್ರಮುಖ ಪಾತ್ರ ವಹಿಸುತ್ತದೆ,'' ಎಂದು ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್ ತಿಳಿಸಿದೆ.

ಈ ಪ್ರಸ್ತಾವನೆಯ ಬಗ್ಗೆ ಪ್ರತಿಕ್ರಿಯಿಸಿದ ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹಮ್ಮದ್, ''ಖಾಸಗಿ ಚಿನ್ನದ ಬೃಹತ್ ನಿಕ್ಷೇಪ ಹೊಂದಿದ ವಿಶ್ವದ ಅತಿದೊಡ್ಡ ದೇಶ ಭಾರತ. ಆದರೂ ದೇಶೀಯ ಬೇಡಿಕೆ ಪೂರೈಸಲು ನಾವು ಆಮದಿನ ಮೇಲೆ ಹೆಚ್ಚು ಅವಲಂಬಿತರಾಗಿದ್ದೇವೆ. ಈ ದಿಸೆಯಲ್ಲಿ ಪ್ರಧಾನಿ ಅವರ ಕರೆಗೆ ನಾವು ಸಂಪೂರ್ಣ ಬೆಂಬಲ ನೀಡುತ್ತೇವೆ. ದೇಶದೊಳಗೆ ಲಭ್ಯವಿರುವ ಚಿನ್ನದ ಜವಾಬ್ದಾರಿಯುತ ಬಳಕೆ, ಮರುಬಳಕೆ ಮತ್ತು ಚಲಾವಣೆಯನ್ನು ಉತ್ತೇಜಿಸುವುದು ಒಂದು ಪ್ರಮುಖ ರಾಷ್ಟ್ರೀಯ ಆದ್ಯತೆಯಾಗಿದೆ ಎಂದು ನಾವೂ ನಂಬುತ್ತೇವೆ. ಸೂಕ್ತವಾದ ನೀತಿ ಬೆಂಬಲ ಮತ್ತು ಸಂಘಟಿತ ಆಭರಣ ವಲಯದ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ, ಚಿನ್ನ ನಗದೀಕರಣ ಯೋಜನೆಯು ಅತ್ಯಂತ ಪರಿಣಾಮ ಕಾರಿ ವ್ಯವಸ್ಥೆಯಾಗಿ ಹೊರಹೊಮ್ಮಬಲ್ಲದು,'' ಎಂದರು.

# ಕೆ.ಎಸ್. ಹಡಪದ ಪ್ರಶಸ್ತಿಗೆ ರಾಜೇಂದ್ರ ನಾಕೋಡ್ ಆಯ್ಕೆ

**ಮೈಸೂರು:** ನಗರದ ಶ್ರೀಗುರು ಪುಟ್ಟರಾಜ ಸಂಗೀತ ಸಭಾದ ವತಿಯಿಂದ ನೀಡುವ 2026ನೇ ಸಾಲಿನ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿಗೆ ಬೆಂಗಳೂರಿನ ತಬಲಾ ಕಲಾವಿದ ಪಂ.ರಾಜೇಂದ್ರ ನಾಕೋಡ್ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು 10 ಸಾವಿರ ರೂ. ನಗದು ಒಳಗೊಂಡಿದೆ. ಮೇ 30ರಂದು ಪಂ.ಕೆ.ಎಸ್. ಹಡಪದ ಸ್ಮರಣಾರ್ಥ ಮೈಸೂರಿನಲ್ಲಿ ನಡೆಯುವ ಸಂಗೀತ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಗೀತ ಸಭಾದ ಅಧ್ಯಕ್ಷ ಭೀಮಾಶಂಕರ ಬಿದನೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಬೆಳೆ ವಿಮೆ ಬಿಡುಗಡೆಗೆ ಆಗ್ರಹಿಸಿ ಹೆದ್ದಾರಿ ತಡೆ

**ಚಳ್ಳಕೆರೆ (ಚಿತ್ರದುರ್ಗ):** ಬೆಳೆ ವಿಮೆ ಬಿಡುಗಡೆ ಮಾಡದ್ದನ್ನು ವಿರೋಧಿಸಿ ರೈತರು ತಾಲೂಕಿನ ಹಿರೇಹಳ್ಳಿ ಬಳಿಯ ಮಂಗಳವಾರ ಶ್ರೀರಂಗಪಟ್ಟಣ-ಬೀದರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್ ತಡೆದು ಪ್ರತಿಭಟನೆ ನಡೆಸಿದರು.

ಕೂಡಲೇ ಬೆಳೆ ನಷ್ಟವಾಗಿರುವ ಎಲ್ಲ ಪಂಚಾಯಿತಿಗಳಿಗೂ ವಿಮೆ ಬಿಡುಗಡೆಗೊಳಿಸಬೇಕು. ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು ಬೆಳೆ ವಿಮೆ ಬಿಡುಗಡೆ ಬಗ್ಗೆ ಭರವಸೆ ನೀಡುವವರೆಗೂ ಹೆದ್ದಾರಿ ತಡೆ ಮುಂದುವರೆಸುವುದಾಗಿ ರೈತರು ಪಟ್ಟು ಹಿಡಿದರು. ''ಚಳ್ಳಕೆರೆ-ಮೊಳಕಾಲ್ಮುರು ತಾಲೂಕು ಸದಾ ಬರ ಎದುರಿಸುತ್ತಿವೆ. ಬೆಳೆ ವಿಮೆ ಕಟ್ಟಿಸಿಕೊಳ್ಳುವಾಗ ಕೊನೆ ದಿನ ಇರುತ್ತದೆ. ರೈತರಿಗೆ ಕೊಡುವಾಗ ಕೊನೆ ದಿನವೇ ಇರುವುದಿಲ್ಲ. ಕಾಲಮಿತಿಯೊಳಗೆ ವಿಮೆ ನೀಡದಲ್ಲಿ ಶೇ.12ರಷ್ಟು ಬಡ್ಡಿ ಸೇರಿಸಿ ಕೊಡಬೇಕು,'' ಎಂದು ರೈತರು ಆಗ್ರಹಿಸಿದರು.

ಅಧಿಕಾರಿಗಳ ಜತೆ ಚರ್ಚೆ ನಡೆಸಿದ ಜಿಲ್ಲಾಧಿಕಾರಿ, ಸಭೆ ನಡೆಸುವ ಭರವಸೆ ನೀಡಿದ್ದರಿಂದ ರೈತರು ಒಂದು ತಾಸಿನ ನಂತರ ಹೆದ್ದಾರಿ ತಡೆ ತೆರವುಗೊಳಿಸಿದರು.



**ಚಳ್ಳಕೆರೆ ತಾಲೂಕಿನ ಹಿರೇಹಳ್ಳಿ ಬಳಿಯಿರುವ ಟೋಲ್ ಬಳಿ ರೈತರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.**

ಅಕ್ರಮಕ್ಕೆ ಕೇಂದ್ರ ಸರಕಾರವೇ ಕಾರಣ, ನೀಟ್ ರದ್ದತಿ ವಿರುದ್ಧ ಸಚಿವರ ತ್ರಿವಳಿ ವಾಗ್ದಾಳಿ

# ರಾಜ್ಯಗಳಿಗೆ ನೀಟ್ ಪರೀಕ್ಷಾ ಹಕ್ಕು ನೀಡಿ

■ **ವಿಕ ಸುದ್ದಿಲೋಕ** ಬೆಂಗಳೂರು

ನೀಟ್ ರದ್ದುಗೊಳಿಸಿ ಆಯಾ ರಾಜ್ಯಗಳಲ್ಲೇ ಪರೀಕ್ಷೆ ನಡೆಸಲು ಕೇಂದ್ರ ಸರಕಾರ ಅವಕಾಶ ನೀಡಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಆಗ್ರಹಿಸಿದರು.



ನೀಟ್ ಅಕ್ರಮದ ಬಗ್ಗೆ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ನೀಟ್ ಅಕ್ರಮಕ್ಕೆ ಕೇಂದ್ರ ಸರಕಾರವೇ ನೇರ ಹೊಣೆ,'' ಎಂದು ಆರೋಪಿಸಿದರು.

''ರಾಜ್ಯದಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಪರೀಕ್ಷೆ ನಡೆಸಲಾಗುತ್ತಿದೆ. ಅದರಲ್ಲಿ ದ್ವಿತೀಯ ಪಿಯುಸಿ ಅಂಕಗಳನ್ನು ಪರಿಗಣಿಸಲಾಗುತ್ತದೆ. ಆದರೆ, ನೀಟ್‌ನಲ್ಲಿ ಆ ಅಂಕಗಳನ್ನು ಪರಿಗಣಿಸುತ್ತಿಲ್ಲ. ಪ್ರತಿ ವರ್ಷ ಒಂದಿಲ್ಲೊಂದು ಸಮಸ್ಯೆಯಾದರೂ ಕೇಂದ್ರ ಶಿಕ್ಷಣ ಇಲಾಖೆ ಎಚ್ಚೆತ್ತುಕೊಳ್ಳುತ್ತಿಲ್ಲ,'' ಎಂದರು.

**ಸೀಟು ಹಂಚಿಕೆ ವಿಳಂಬ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಮರುಪರೀಕ್ಷೆ ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಮುಂದಾಗಿದೆ. ಮೇ 3ರಂದು ನಡೆದಿದ್ದ ನೀಟ್ ರದ್ದಾದ ಹಿನ್ನೆಲೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ವೈದ್ಯಕೀಯ ಸೀಟುಗಳ ಹಂಚಿಕೆ ಪ್ರಕ್ರಿಯೆ ಕೂಡ ವಿಳಂವಾಗುವ ಸಾಧ್ಯತೆಯಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, ''ನೀಟ್ ಪರೀಕ್ಷೆ ರದ್ದಾದ ಹಿನ್ನೆಲೆಯಲ್ಲಿ ಕೌನ್ಸೆಲಿಂಗ್, ಸೀಟು ಹಂಚಿಕೆ ಬಗ್ಗೆ ಸರಕಾರದ ಜತೆ ಚರ್ಚಿಸಿ ವಿದ್ಯಾರ್ಥಿಗಳ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳಲಾಗುವುದು,'' ಎಂದರು.



**ಇದು ಕೇಂದ್ರ ಸರಕಾರದ ಬಹುದೊಡ್ಡ ಹಗರಣವಾಗಿದ್ದು, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟವಾಡಿದ ಕೇಂದ್ರ ಶಿಕ್ಷಣ ಸಚಿವ ರಾಜೀನಾಮೆ ನೀಡಬೇಕು.**

**- ಡಾ.ಶರಣಪ್ರಕಾಶ್ ಪಾಟೀಲ್** ವೈದ್ಯಕೀಯ ಶಿಕ್ಷಣ ಸಚಿವ



**ವರ್ಷಗಟ್ಟಲೇ ಹಗಲಿರುಳು ಶ್ರಮಪಟ್ಟು ಪರೀಕ್ಷೆ ಬರೆದಿದ್ದ ಲಕ್ಷಾಂತರ ವಿದ್ಯಾರ್ಥಿಗಳ ಮೇಲೆ ದಿಢೀರ್ ಮರುಪರೀಕ್ಷೆ ನಿರ್ಧಾರ ಗದಾಪ್ರಹಾರ ದಂತಿದೆ.**

**- ಮಧು ಬಂಗಾರಪ್ಪ** ಶಿಕ್ಷಣ ಸಚಿವ

## ಎಚ್ಚೆತ್ತೆ ಕೌಂಟರ್!

**ಎಲ್ಲೋ ರಾಜಸ್ತಾದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ ಎಂದು ಹೇಳಲಾಗುತ್ತಿದೆ. ಯಾರೋ ಮಾಡಿದ ತಪ್ಪಿಗೆ ಕೇಂದ್ರ ಸರಕಾರದ ಮೇಲೆ ತಪ್ಪು ಹೊರೆಸಲು ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ಅನೇಕ ಬಾರಿ ಇಂತಹ ಘಟನೆ ಕಾಂಗ್ರೆಸ್‌ನವರ ಕಾಲದಲ್ಲೂ ಆಗಿದೆ. ಈ ಬಗ್ಗೆ ಚರ್ಚಿಸುವುದಕ್ಕೆ ಕಾಂಗ್ರೆಸ್‌ನವರಿಗೆ ಯಾವ ನೈತಿಕತೆ ಇದೆ.**



**-ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

**ನೀಟ್ ಮರುಪರೀಕ್ಷೆಗೆ ಬೇಕು ಸಾಕಷ್ಟು ಕಾಲಾವಕಾಶ**

## ಸಿಇಟಿ ಕೌನ್ಸೆಲಿಂಗ್‌ಗೆ ಗ್ರಹಣ

■ **ಸ್ಟೀವನ್ ರೇಗೊ** ಮಂಗಳೂರು
stevan.rego@timesofindia.com

ವೈದ್ಯಕೀಯ ಪ್ರವೇಶ ಪರೀಕ್ಷೆ ರದ್ದಾಗಿರುವುದು ಕೇವಲ ವೈದ್ಯಕೀಯ ಆಕಾಂಕ್ಷಿಗಳಿಗೆ ಮಾತ್ರವಲ್ಲದೆ, ಎಂಜಿನಿಯರಿಂಗ್ ಸೇರಿದಂತೆ ಇತರೆ ವೃತ್ತಿಪರ ಕೋರ್ಸ್‌ಗಳಿಗೆ ಸೇರಬಯಸುವ ವಿದ್ಯಾರ್ಥಿಗಳಿಗೂ ಆತಂಕ ತಂದಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ನೀಟ್ ಮತ್ತು ಸಿಇಟಿ ಕೌನ್ಸೆಲಿಂಗ್‌ಗಳನ್ನು ಏಕಕಾಲದಲ್ಲಿ ನಡೆಸುವುದರಿಂದ, ನೀಟ್ ವಿಳಂಬವು ಇಡೀ ಶೈಕ್ಷಣಿಕ ವೇಳಾಪಟ್ಟಿಯನ್ನೇ ಅಸ್ತವ್ಯಸ್ತಗೊಳಿಸುವ ಸಾಧ್ಯತೆಯಿದೆ.

ಸಾಮಾನ್ಯವಾಗಿ ನೀಟ್ ಫಲಿತಾಂಶಕ್ಕೂ ಮೊದಲೇ ಸಿಇಟಿ ಕೌನ್ಸೆಲಿಂಗ್ ಆರಂಭಿಸುವ ಯೋಜನೆ ಇತ್ತು. ಆದರೆ, ಈಗ ನೀಟ್ ಮರುಪರೀಕ್ಷೆ ನಡೆದು ಫಲಿತಾಂಶ ಬರಲು ಕನಿಷ್ಠ ಎರಡು ತಿಂಗಳು ಬೇಕಾಗುತ್ತದೆ. ಅಲ್ಲಿಯವರೆಗೆ ಕೌನ್ಸೆಲಿಂಗ್ ಪ್ರಕ್ರಿಯೆ ಸ್ಥಗಿತಗೊಂಡರೆ, ಎಐಸಿಟಿಇ ನಿಗದಿಪಡಿಸಿರುವ ಸೆಪ್ಟೆಂಬರ್ 15ರ ಡೆಡ್‌ಲೈನ್ ಒಳಗೆ ಎಂಜಿನಿಯರಿಂಗ್ ಪ್ರವೇಶಾತಿ ಮುಗಿಸುವುದು ಕೆಇಎಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಅನೇಕ ವಿದ್ಯಾರ್ಥಿಗಳು ನೀಟ್ ಮತ್ತು ಸಿಇಟಿ ಎರಡನ್ನೂ ಬರೆದಿರುತ್ತಾರೆ. ನೀಟ್‌ನಲ್ಲಿ ಸೀಟು ಸಿಗದಿದ್ದರೆ ಅವರು ಎಂಜಿನಿಯರಿಂಗ್ ಕಡೆಗೆ ಬರುತ್ತಾರೆ. ಈಗ ನೀಟ್ ಫಲಿತಾಂಶ ತಡವಾದರೆ ಅಂತಹ ವಿದ್ಯಾರ್ಥಿಗಳು ಗೊಂದಲಕ್ಕೆ ಸಿಲುಕಲಿದ್ದಾರೆ. ಕೌನ್ಸೆಲಿಂಗ್ ವಿಳಂಬವಾದರೆ ಮೊದಲ ವರ್ಷದ ಎಂಜಿನಿಯರಿಂಗ್ ತರಗತಿಗಳು ತಡವಾಗಿ ಆರಂಭವಾಗಲಿವೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಸೆಪ್ಟೆಂಬರ್ 15ರೊಳಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಲು ಸೂಚಿಸಿದೆ. ಒಂದು ವೇಳೆ ನೀಟ್ ಮರುಪರೀಕ್ಷೆ ಜುಲೈ ಅಥವಾ ಆಗಸ್ಟ್‌ನಲ್ಲಿ ನಡೆದರೆ, ಅಲ್ಲಿಯವರೆಗೆ ಕಾಯುವುದು ಅಸಾಧ್ಯ. ಹೀಗಾಗಿ ಕೆಇಎ 'ಪ್ಲಾನ್ ಬಿ' ಸಿದ್ಧಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

**ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ನೀಟ್ ಈ ಹಿಂದಿನ ಪರೀಕ್ಷೆ ರದ್ದು ಮಾಡಿರುವ ಬಗ್ಗೆ ಮಾಹಿತಿ ಬಂದಿದೆ. ಕೆಇಎ ಈ ಕುರಿತು ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕು. ಈ ಕುರಿತು ಶೀಘ್ರದಲ್ಲಿಯೇ ಮಾಹಿತಿ ನೀಡಲಾಗುವುದು.**

**-ಎಚ್.ಪ್ರಸನ್ನ** ಕಾರ್ಯನಿರ್ವಾಹಕ ನಿರ್ದೇಶಕ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**ಕುಪ್ಮಾ ಕರ್ನಾಟಕ ಬೇಸರ**

**ಮಂಗಳೂರು:** ತಪ್ಪಿತಸ್ಥರು ಯಾರೇ ಇದ್ದರೂ ಅವರನ್ನು ಯಾವುದೇ ಕಾರಣಕ್ಕೂ ಕಾನೂನಿನಿಂದ ತಪ್ಪಿಸಿಕೊಳ್ಳದಂತೆ ನೋಡಬೇಕು. ಅದಕ್ಕಾಗಿ ಕೇಂದ್ರ ತನಿಖಾ ತಂಡ ಸಿಬಿಐ ಮೂಲಕ ತನಿಖೆ ನಡೆಸಬೇಕೆಂದು ಕುಪ್ಮಾ ಕರ್ನಾಟಕ ಒತ್ತಾಯಿಸಿದೆ. ನೀಟ್‌ನಂತಹ ಪ್ರಮುಖ ಪರೀಕ್ಷೆಗಳನ್ನು ಆತ್ಮಸ್ಥೈರ್ಯದಿಂದ ಎದುರಿಸುವ ವಾತಾವರಣ ನಿರ್ಮಿಸಬೇಕು. ಸೋರಿಕೆಗಳಾದಲ್ಲಿ ಪ್ರಾಮಾಣಿಕವಾಗಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮಗಳು ಬೀರುತ್ತದೆ ಎಂದು ಕುಪ್ಮಾ ರಾಜ್ಯ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಮತ್ತು ರಾಜ್ಯ ಕಾರ್ಯದರ್ಶಿ ಪ್ರೊ.ನರೇಂದ್ರ ಎಲ್.ನಾಯಕ್ ತಿಳಿಸಿದ್ದಾರೆ.

## ವಿದ್ಯಾರ್ಥಿಗಳ ಬೇಸರ

**ಎರಡು ವರ್ಷಗಳಿಂದ ಶ್ರಮಪಟ್ಟು ಓದಿ ಪರೀಕ್ಷೆ ಬರೆದಿದ್ದೆ. ಉತ್ತಮ ಫಲಿತಾಂಶ ಬರುವ ನಿರೀಕ್ಷೆಯಿತ್ತು . ಈಗ ಮರು ಪರೀಕ್ಷೆಯಲ್ಲಿ ಹಲವು ವಿದ್ಯಾರ್ಥಿಗಳಿಗೆ ಅನ್ಯಾಯವಾಗುವ ಸಾಧ್ಯತೆಯಿದೆ.**

**-ಮಂಜುಳಾ** ನೀಟ್ ಪರೀಕ್ಷೆ ಬರೆದ ಅಭ್ಯರ್ಥಿ

**ಮೊದಲ ಬಾರಿ ಪರೀಕ್ಷೆ ಬರೆಯುವಾಗ ಸಾಕಷ್ಟು ಅಭ್ಯಾಸ ಮಾಡಿರುತ್ತೇವೆ. ಎರಡು ಬಾರಿ ಪರೀಕ್ಷೆ ಬರೆಯಬೇಕು ಎಂದರೆ ಮತ್ತೆ ಗೊಂದಲಕ್ಕೆ ಸಿಲುಕುವ ಸಾಧ್ಯತೆಯಿದೆ. ಈಗ ದಿಢೀರ್ ಪರೀಕ್ಷೆ ರದ್ದು ಮಾಡಿರುವುದು ತೀವ್ರ ಬೇಸರ ತಂದಿದೆ.**

**-ನಿಹಾರಿಕಾ** ನೀಟ್ ಪರೀಕ್ಷೆ ಬರೆದ ಅಭ್ಯರ್ಥಿ

**ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ. ತಿಂಗಳುಗಳಿಂದ ಎಲ್ಲವೂ ಪಾರದರ್ಶಕ ಹಾಗೂ ಭದ್ರವಾಗಿದೆ ಎಂದು ಸರಕಾರ ಹೇಳುತ್ತಿತ್ತು. ಆದರೆ ಈಗ ಅವರದೇ ಸಂಸ್ಥೆಗಳ ವ್ಯವಸ್ಥೆ ವಿಫಲವಾಗಿದೆ ಎಂದು ಒಪ್ಪಿಕೊಳ್ಳುವ ಪರಿಸ್ಥಿತಿ ಎದುರಾಗಿದೆ. ಈ ವೈಫಲ್ಯಕ್ಕೆ ಯಾರು ಹೊಣೆ ಎಂಬುದನ್ನು ಸ್ಪಷ್ಟ ಪಡಿಸಬೇಕು. ವಿದ್ಯಾರ್ಥಿಗಳು ಮತ್ತು ಪೋಷಕರು ಅನುಭವಿಸಿರುವ ಮಾನಸಿಕ ಒತ್ತಡ ಹಾಗೂ ಹಿಂಸೆಗೆ ಸರಕಾರ ಉತ್ತರ ನೀಡಬೇಕಾಗಿದೆ.**

**- ಡಾ.ಪ್ರಭಾ ಮಲ್ಲಿಕಾರ್ಜುನ್** ಸಂಸದೆ

# ವಿದ್ಯಾರ್ಥಿಗಳಿಗೆ ನೀಟ್ ಬರಸಿಡಿಲು

» ಮೊದಲ ಪುಟದಿಂದ

ಈಗಾಗಲೇ ಪ್ರಕರಣದ ತನಿಖೆ ನಡೆಸುತ್ತಿದ್ದ ರಾಜಸ್ಥಾನ ಪೊಲೀಸರ 'ವಿಶೇಷ ಕಾರ್ಯಾಚರಣೆ ತಂಡ'ದಿಂದ(ಎಸ್ಒಜಿ) ಅಗತ್ಯ ಮಾಹಿತಿ ಸಂಗ್ರಹಿಸಿರುವ ಸಿಬಿಐ, ವಿವಿಧ ರಾಜ್ಯಗಳಿಗೆ ತನಿಖಾ ತಂಡಗಳನ್ನು ಕಳುಹಿಸಿದೆ.

ಈ ಮಧ್ಯೆ, ದಿಲ್ಲಿ ಸೇರಿದಂತೆ ದೇಶದ ಹಲವು ನಗರಗಳಲ್ಲಿ ವಿದ್ಯಾರ್ಥಿ ಸಮೂಹ ಭಾರಿ ಪ್ರತಿಭಟನೆ ನಡೆಸಿದ್ದು, 'ಎನ್‌ಟಿಎ' ಕಾರ್ಯವೈಖರಿಯನ್ನು ಪ್ರಶ್ನಿಸಿದೆ. ಎಸ್‌ಎಫ್‌ಐ, ಎನ್‌ಎಸ್‌ಯುಐ ಹಾಗೂ ಇತರೆ ಸಂಘಟನೆಗಳು ಕೇಂದ್ರ ಸರಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿಲ್ಲ.

**ಮರು ಪರೀಕ್ಷೆಗೆ ಶುಲ್ಕವಿಲ್ಲ, ಹಳೆ ಶುಲ್ಕ ವಾಪಸ್**

**ನೀಟ್ ಮರುಪರೀಕ್ಷೆಗೆ ಮತ್ತೊಮ್ಮೆ ಶುಲ್ಕ ಕಟ್ಟುವ ಅಗತ್ಯವಿಲ್ಲ, ಹೊಸದಾಗಿ ನೋಂದಣಿಯಾಗುವ ಅಗತ್ಯವೂ ಇಲ್ಲ. ಅಲ್ಲದೆ, ಈಗ ಬರೆದಿರುವ ಪರೀಕ್ಷೆಗಾಗಿ ಪಡೆದ ಶುಲ್ಕವನ್ನು ಮರುಪಾವತಿ ಮಾಡುತ್ತೇವೆ. ಪರೀಕ್ಷಾ ಏಜೆನ್ಸಿಯ ಆಂತರಿಕ ಸಂಪನ್ಮೂಲವನ್ನು ಬಳಸಿ ಮರು ಪರೀಕ್ಷೆ ನಡೆಸಲಾಗುವುದು,'' ಎಂದು ಎನ್‌ಟಿಎ ಮುಖ್ಯಸ್ಥರು ಹೇಳಿದ್ದಾರೆ.**

# 10 ಲಕ್ಷ ರೂ.ಗೆ ಖರೀದಿಸಿ, 15 ಲಕ್ಷ ರೂ. ಮಾರಿದ!

**ಮುಂಬಯಿ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧ ಸಿಬಿಐ ಅಧಿಕಾರಿಗಳು ವಶಕ್ಕೆ ಪಡೆದಿರುವ ಆರೋಪಿ ಶುಭಮ್ ಖಾಯಿರ್ನರ್ 'ಗೆಸ್ ಪೇಪರ್' ಅನ್ನು ಪುಣೆಯ ಏಜೆಂಟ್‌ನಿಂದ 10 ಲಕ್ಷ ರೂ.ಗೆ ಖರೀದಿಸಿ, ಬಳಿಕ ಹರಿಯಾಣದಲ್ಲಿ ಪ್ರಶ್ನೆಪತ್ರಿಕೆ ಕೇಳಿದವರಿಗೆ 15 ಲಕ್ಷ ರೂ.ಗೆ ಮಾರಾಟ ಮಾಡಿದ್ದ ಎಂದು ತಿಳಿದುಬಂದಿದೆ. ಆರೋಪಿ ಶುಭಮ್‌ನನ್ನು ಸಿಬಿಐ ಅಧಿಕಾರಿಗಳು ನಾಸಿಕ್‌ನಲ್ಲಿ ವಶಕ್ಕೆ ಪಡೆದಿದ್ದಾರೆ. ಆರೋಪಿಯ ತಂದೆ ವೃತ್ತಿಯಲ್ಲಿ ವೈದ್ಯರಾಗಿದ್ದು, ಪುತ್ರನ ವಿರುದ್ಧದ ಆರೋಪವನ್ನು ಅಲ್ಲಗಳೆದಿದ್ದಾರೆ.



ಆರೋಪಿ ಶುಭಮ್ ಪ್ರಸ್ತುತ ಆಯುರ್ವೇದ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದು, ತನಗೆ ಸಿಕ್ಕ ಗೆಸ್ ಪೇಪರ್‌ನ ಫೋಟೊಗಳನ್ನು ಇತರರಿಗೆ ಹಂಚಿದ್ದಾನೆ. ಆ ಮೂಲಕ ಲಕ್ಷಗಟ್ಟಲೇ ಹಣ ಮಾಡಿದ್ದಾನೆ ಎಂದು ಪೊಲೀಸರು ಪ್ರಾಥಮಿಕ ತನಿಖೆಯಲ್ಲಿ ಪತ್ತೆ ಮಾಡಿದ್ದಾರೆ. ಈತನಿಗೂ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆ ಜಾಲದ ಕಿಂಗ್‌ಪಿನ್‌ಗಳ ನಡುವಿನ ಸಂಪರ್ಕದ ಸುಳಿವು ಭೇದಿಸುವಲ್ಲಿ ಸಿಬಿಐ ಅಧಿಕಾರಿಗಳು ಮಗ್ನರಾಗಿದ್ದಾರೆ.

# ಕೇಂದ್ರ ಸರಕಾರದ ಕ್ರಮಕ್ಕೆ ಸಿಎಂ, ಡಿಸಿಎಂ ಖಂಡನೆ

**ಬೆಂಗಳೂರು:** ದೇಶಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳು ಬರೆದಿದ್ದ 'ನೀಟ್ ಯುಜಿ 2026' ಪರೀಕ್ಷೆ ರದ್ದುಗೊಳಿಸಿರುವ ಕೇಂದ್ರ ಸರಕಾರದ ಕ್ರಮವನ್ನು ಕಾಂಗ್ರೆಸ್, ಯುವಜನತೆಗೆ ಬಗೆದ ದ್ರೋಹ ಎಂದು ಹೇಳಿದೆ.




'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಸಿಎಂ ಸಿದ್ದರಾಮಯ್ಯ, ''ಕಷ್ಟಪಟ್ಟು ಬರೆದಿದ್ದ 22ಲಕ್ಷ ವಿದ್ಯಾರ್ಥಿ ಸಮುದಾಯವನ್ನು ಕೇಂದ್ರ ಸರಕಾರ ಅನಿಶ್ಚಿತತೆಗೆ ದೂಡಿದೆ.ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ ಎಂದು ಹಿಂದೆಯೇ ನಮ್ಮ ಸರಕಾರ ನೀಟ್‌ಗೆ ವಿರೋಧ ವ್ಯಕ್ತಪಡಿಸಿತ್ತು,'' ಎಂದಿದ್ದಾರೆ.

''ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ಪ್ರತಿಭೆಯನ್ನು ರಕ್ಷಣೆ ಮಾಡುವಲ್ಲಿ ಸರಕಾರದ ವೈಫಲ್ಯಕ್ಕೆ ಸಾಕ್ಷಿಯಾಗಿವೆ. ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಕೋಚಿಂಗ್, ಪ್ರಯಾಣ ಮತ್ತಿತರ ಉದ್ದೇಶಕ್ಕೆ ಅಪಾಯ ಹಣ ವೆಚ್ಚ ಮಾಡಿದ್ದು ವ್ಯರ್ಥವಾಗಿದೆ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಕೂಡಲೇ ರಾಜೀನಾಮೆ ನೀಡಬೇಕು,'' ಎಂದು ಆಗ್ರಹಿಸಿದ್ದಾರೆ. ಡಿಸಿಎಂ ಡಿ.ಕೆ. ಶಿವಕುಮಾರ್, ''ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ನೀಟ್ ಪರೀಕ್ಷೆ ರದ್ದಾಗಿರುವುದು ನಮ್ಮೆಲ್ಲರಿಗೂ ದೊಡ್ಡ ಅಪಮಾನ. ಇಂತಹ ಪ್ರಕರಣಗಳು ಪರೀಕ್ಷೆಯ ನಂಬಿಕೆಯನ್ನೇ ಕಳೆಯುತ್ತವೆ. ಈ ಹಿಂದೆ ಪಿಎಸ್ಐ ಹಗರಣ ಸೇರಿದಂತೆ ಅನೇಕ ಪ್ರಕರಣ ನೋಡಿದ್ದೇವೆ. ಇದು ಯಾರ ವೈಫಲ್ಯ? ಎಂದು ನಮ್ಮ ಪ್ರತಿನಿಧಿಸುವ ಸಂಸದರು, ಕೇಂದ್ರ ಸಚಿವರು ಹೇಳಬೇಕು. ಈ ಪ್ರಕರಣ ಕರ್ನಾಟಕದಲ್ಲಿ ಆಗಿದ್ದರೆ ಇಷ್ಟು ಹೊತ್ತಿಗೆ ಕಟ್ಟಡದ ಮೇಲೆ ಕೂತು ಕೂಗಾಡುತ್ತಿದ್ದರು,'' ಎಂದು ಹೇಳಿದ್ದಾರೆ.

**STOVE KRAFT LIMITED**

Registered Office: #81, Harohalli Industrial Area, Kanakapura Taluk, Ramnagara District - 562112.
Corporate Office: No.30, 2nd Cross, CSI Compound, Mission Road, Bangalore - 560027
Ph.: 080 28016222 | Email: cs@stovekraft.com
Website: www.stovekraft.com
CIN No.: L29301KA1999PLC025387

STOVEKRAFT®

FY comparison

Revenue 16,074.24mn +10.87% | EBITDA 1,661.34mn +10.26% | PAT 419.91mn +9.05%

1. Key financial information — Rs. in Million, except per share data

| Sr. No | Particulars | Quarter Ended | | Year Ended | |
|---|---|---|---|---|---|
| | | 31st March 2026 | 31st March 2025 | 31st March 2026 | 31st March 2025 |
| | | Unaudited | Unaudited | Audited | Audited |
| 1 | Revenue from Operations | 4,145.23 | 3,129.92 | 16,074.24 | 14,498.17 |
| 2 | EBITDA* | 394.53 | 294.56 | 1,661.34 | 1,506.71 |
| 3 | Profit Before Tax | 50.76 | 10.88 | 509.83 | 487.88 |
| 4 | Profit After Tax for the period | 60.51 | 14.48 | 419.91 | 385.05 |
| 5 | Total Comprehensive Income for the period | 63.09 | 5.83 | 422.47 | 382.88 |
| 6 | Paid up Equity Share Capital (Face Value of Rs.10/- each) | 331.07 | 330.76 | 331.07 | 330.76 |
| 7 | Earnings per Share** Basic (in Rs.) (Face value of Rs. 10 each) | 1.83 | 0.44 | 12.69 | 11.65 |
| 8 | Earnings per Share** Diluted (in Rs.) (Face value of Rs. 10 each) | 1.83 | 0.44 | 12.69 | 11.64 |

"*Excludes Other Income and Other gains and losses.
**EPS is not annualised for the quarter and year ended March 31,2026 and for the quarter ended March 31,2025)."

| Sr. No | Particulars | As on | |
|---|---|---|---|
| | | 31st March 2026 | 31st March 2025 |
| | | Audited | Audited |
| 1 | Total Equity | 5042.42 | 4708.35 |
| 2 | Net Debt* | 0.00 | 1768.09 |

*Excludes lease liabilities and suppliers credit.

Notes :
- The statement of audited financial results for the quarter and the financial year ended March 31, 2026 were reviewed and recommended by the Audit Committee and approved by the Board of Directors at their respective meetings held on May 12,2026.
- The Financial Statements have been prepared in accordance with Indian Accounting Standards ("IndAS) prescribed by section 133 of the Companies Act 2013 and in terms of Regulation 33 of SEBI (Listing Obligations and Disclosure Requirements) Regulations, 2015
- The figures for the quarter ended March 31,2026 are the balancing figures between the audited figures in respect of the full financial year upto March 31,2026 and the unaudited published year to date upto December 31, 2025 being the date of the end of third quarter of the financial year, which were subject to limited review by statutory auidtors.
- The above is an extract of the detailed format of audited financial results filed with the stock exchanges under Regulation 33 of the SEBI (Listing Obligations and Disclosure Requirements) Regulations, 2015. The full format of the audited financial results are available on the Stock Exchange websites www.nseindia.com and www.bseindia.com and on the company's website www.stovekraft.com.

Date : 12/05/2026
Place : Bengaluru

For detailed results scan the QR Code

For & On Behalf of the Board
Rajendra Gandhi
Managing Director



# W. Asia crisis, a balance-of-payments stress test, says Anantha Nageswaran

**BETTER PLACED.** India has the tools to navigate the current environment of conflicts

**Our Bureau**
New Delhi

Chief Economic Advisor V Anantha Nageswaran on Tuesday termed the West Asia crisis as a "live balance-of-payments stress test". He, however, expressed optimism that India has the tools to navigate the current environment of conflicts.

> Currently, the world is geopolitically contested and dotted with active conflicts
>
> **V ANANTHA NAGESWARAN**
> Chief Economic Advisor



In his address at the CII's Annual Business Summit here, Nageswaran said 87 per cent of India's crude requirement is imported, of which 46 per cent transits through or near the Strait of Hormuz, where the seven-day moving average tanker traffic has fallen to five vessels. Sixty per cent of the LPG requirement is imported, and over 90 per cent of this moves via the Gulf. Thirty eight per cent of annual remittances originate in Gulf countries.

"The West Asia crisis, therefore, is not a foreign policy concern that occasionally bleeds into economic planning. It is a live balance-of-payments stress test, with direct consequences for inflation, the current account, and the exchange rate. Managing the current account credibly, financing it, and preventing further currency depreciation are the central macroeconomic imperatives of FY27," Nageswaran said. India's macroeconomic foundations, the fiscal consolidation path, infrastructure investment, and reform record provide a base from which it can navigate this environment effectively, he said.

**'STRATEGIC ERROR'**

Noting that the world is "geopolitically contested and dotted with active conflicts", Nageswaran said it would be a "strategic error" for emerging economies to continue planning on the assumption that the pre-2020 global economic architecture would reassert itself.

"India, given its scale, democratic legitimacy and the breadth of relationships, is better placed than most to help shape what comes next," he said, adding that strategic clarity is needed to recognise that only a limited time window is available to reposition trade relationships, technology partnerships, supply chain architecture, and the coalition building that will shape towards the next international economic order.

He pinpointed the structural shifts that are imperative for emerging economies, including trade wars, semiconductor supply chains, energy transition premium, and permanent repricing of geopolitical risk.

# Economy not far from 'oil shock' unless Iran war stops: Uday Kotak

**Amiti Sen**
New Delhi

The economy is on the verge of a significant "oil shock" as the delayed consequences of the prolonged US-Iran war are set to kick in now, Uday Kotak, Founder and Director of Kotak Mahindra Bank, warned on Tuesday.

He said businesses and policymakers should adopt a mindset of "strategic paranoia" and embark on immediate preparation to survive the downturn in financial stability.

"We haven't seen the impact of the war in two months, but now it's coming, and it's coming big... You are not far away from the shock unless the Iran war stops tomorrow morning. We need to get ready for tough times rather than waiting for the shock to hit us," Kotak said at the CII Annual Business Summit 2026.



Uday Kotak, Founder and Director of Kotak Mahindra Bank (file photo)

"We should prepare for paranoia before the event," he said, stressing on the need for a low-cost reshaping of the Indian economy, with businesses taking the initiative instead of making demands of the government.

**BRACE FOR IT**

"Let's move as people, businesses, and policymakers to walk more than our talk," Kotak said.

He noted that the world was moving from a collaborative mindset back to pre-1945 tribalism, where countries fought for control over territory, ownership and seeking rent from assets. The control over tangible and intangible assets is becoming concentrated in a few hands, he added. "Who would have thought that the control of a strait in the Middle East will make the east of the Middle East so vulnerable. ...How power for the future will determine our destiny? Many ways we are seeing raw power becoming the rule of life. And that is back to tribalism," he said.

Markets are also playing on the fundamental theme of reversion to mean, he added.

"We need to be strategic and real in this tribal mindset world... what matters is control over assets, supported by a strong P&L (profit and loss)," he said.

Over the last two days, Prime Minister Narendra Modi, too, has been warning citizens of tough times ahead and asking them to adopt "wartime austerity" to preserve India's economic resilience.

# Modi's UAE visit to focus on energy security: MEA

**Our Bureau**
New Delhi

Prime Minister Narendra Modi's visit to the United Arab Emirates this week will focus on strengthening India's energy security and enhancing trade and co-operation amid continuing tensions in West Asia, the Ministry of External Affairs said on Tuesday.

On whether India was adopting a new policy on buying oil from Russia despite the sanctions, MEA Spokesperson Randhir Jaiswal said India will continue to source oil based on the energy security needs and interests of its 1.4 billion people.

Earlier in the day, Petroleum and Natural Gas Minister Hardeep Singh Puri refuted reports on India refusing a LNG consignment from Russia. "We have never imported LNG from Russia," the Minister said at the CII Annual Summit.

**5 DAY TOUR**

Modi will arrive in the UAE on May 15 as part of his five-nation diplomatic tour which will also include visits to the Netherlands, Sweden, Norway and Italy.

The PM is scheduled to hold talks with UAE President Mohamed bin Zayed Al Nahyan in Abu Dhabi.

**EFFORTS ON**

The vi crisis. As global disruptions from the Iran conflict intensify, India is in discussions with the UAE to explore long-term alternative routes that bypass the Strait of Hormuz to ensure stable energy exports. "Modi's UAE visit priority is to strengthen energy supplies," Jaiswal said, adding that there would also be discussions on trade.

India-UAE bilateral trade surpassed $100 billion in FY26.

# India has adequate fuel stock, but OMCs may incur ₹1 lakh crore loss: Petroleum Minister Puri

**Our Bureau**
New Delhi

Minister of Petroleum and Natural Gas Hardeep Singh Puri on Tuesday said India has sufficient supplies of petrol, diesel and cooking gas despite the disruptions in the Strait of Hormuz, and added that the country has ramped up domestic production of LPG . Without commenting on whether fuel price hikes were on the cards, he pointed out that the government had not hiked petrol and diesel prices in the past four years.

He was, however, worried that oil marketing companies were losing ₹1,000 crore per day, with projected cumulative loss of ₹1 lakh crore in a single quarter if crude prices remain elevated and retail fuel prices continue to be sold below cost. Cumulative under-recoveries are at nearly ₹1.98 lakh crore, he stated.

At the CII Annual Business Summit 2026, Puri said, "These losses in one quarter are enough to wipe out profits that oil companies earn in the entire year." "How long will the oil companies be able to take it? At some stage, the government will have to take a view on that," he added.

Stressing that India has no supply-side problems, Puri pointed out that the country currently holds around 60 days of crude oil supplies, 60 days of LNG inventory and 45 days of LPG reserves.

**RESILIENT DEMAND**

He noted that fuel demand has remained resilient during the crisis, with petrol consumption rising around 6 per cent, while LPG demand moderated to about 75,000 tonnes per day from nearly 90,000 tonnes earlier, partly because of seasonal factors.

He pointed out that there is sufficient crude oil and LPG inventory, and domestic LPG production has been ramped up to 54,000 tonnes per day from about 36,000 tonnes previously.

He termed Prime Minister Narendra Modi's recent call for moderation in energy consumption as a "visionary" long-term approach rather than signalling imminent restrictions.

"Today, we are in a situation where we don't know how long the blockades or counter-blockades will continue. But I can tell you categorically that today we are in a situation where, unlike other countries in the world which have had to either face problems in terms of availability and supply or where prices have gone rampant, we have had stable prices and supplies," Puri added.

# 'Draft of new employment policy to be released soon for feedback'

**Dalip Singh**
New Delhi

The government is working on a new employment policy, and a draft will be released for stakeholder feedback, Labour and Employment Minister Mansukh Mandaviya said on Tuesday at the Confederation of Indian Industry (CII) Annual Business Summit 2026.

"You all should read it (draft of employment policy) and share your inputs, which is important to provide a good employment policy for the country," Mandaviya said as part of his speech on labour reforms.

In his nearly hour-long address that touched on a wide range of issues, the Minister came up with several suggestions, including urging industry to join hands with the government in formulating a roadmap out of the West Asia conflict.

**ROLE OF BUSINESSES**

"Registration from the industry is less," the Minister remarked in reference to the employment-linked financial incentive scheme for fresh hires and their employers between August 1, 2025, and July 31, 2027.

He appreciated the role played by the CII in fostering job creation through model career centres. Stating that it shouldn't be the government's responsibility alone to organise the employment fairs connecting jobseekers with employers across the country, he called on industries and associations such as the CII to play a more active role in employment generation initiatives.

He stressed that the government could only play the role of a catalyst and partner in such efforts.

The minister expressed concern over the growing challenges faced by contractual workers and added that directions had been issued to industries to ensure timely payment of wages in compliance with labour laws.

# India-Oman FTA may kick in on June 1: Goyal

**Our Bureau**
New Delhi

The India-Oman free trade agreement (FTA) is likely to come into force on June 1, Commerce and Industry Minister Piyush Goyal said. But in the case of the India-Chile FTA negotiations, some issues remainunresolved, he added.

On the impact of the ongoing war in Iran on the Indian economy, the Minister observed that India has consistently turned crises into opportunities. "The current global situation should be viewed as a wake-up call for India to become more efficient, productive and self-reliant. The world is going through a challenging time. India has a great opportunity to outshine others," Goyal said on Tuesday at the CII Annual Summit.

On the progress in FTAs, the Minister said the one with Oman was likely to take effect very soon.

"I have had a good meeting with Oman team today and most probably the Oman free trade agreement will come into effect from June 1, 2026," Goyal told reporters on the sidelines of the CII event.

Under the India-Oman FTA, about 98 per cent of India's exports will face zero duties in that West Asian country. Items such as textiles, leather goods, engineering goods, chemicals, pharmaceuticals, and food and marine products are set to benefit.



Union Minister Piyush Goyal addresses the CII Annual Business Summit 2026 ANI

**CHILE'S MINERAL DEAL**

There are, however, challenges to be ironed out in the India-Chile FTA talks. "I met the Chilean Foreign Minister here. There are challenges given the different size of the economies and different scale of opportunities that both countries offer to each other... We are trying to bridge that gap through innovative solutions," Goyal said.

A deal on critical minerals is crucial for India in its pact with Chile, which holds the world's largest lithium reserves. "If we get a good deal around critical minerals and other important mining concessions, then may be there is some very good possibility that we should be able to finalise an FTA with Chile," he said.

**EXPORT TARGET**

In his address at the event, the Minister stressed the need for members of Indian industry to support each other and added that the collective growth of Indian industry would strengthen the country's future.

He called on industry to work towards achieving the target of $2 trillion exports over the next five to six years. He observed that the target was achievable with annual export growth of around 15 per cent. Sectors across the economy, including automobiles, steel and start-ups, have the potential to drive this growth through innovation, competitiveness and expansion into global markets, Goyal said.

# Govt weighs opening ballistic missile production to private sector: Defence Secy

**Dalip Singh**
New Delhi

Defence Secretary Rajesh Kumar Singh on Tuesday said the government is considering opening up ballistic missile manufacturing to the private sector, following its decision to allow private participation for the first time in the indigenous fifth-generation fighter jet project under the Advanced Medium Combat Aircraft (AMCA) programme.

> **We are targeting a defence production output** of ₹8.8 lakh crore, he said

Both these manufacturing segments were restricted to defence public sector undertakings. The Defence Secretary stated that the proposed move is aimed at providing a level playing field to the private sector, as laid out in the draft Defence Acquisition Procedure 2026 released by the Ministry of Defence earlier this year to amend the procurement manual in effect since 2020.

Singh also said that the government is working on a new line of credit scheme to boost defence exports to less developed countries.

He said there is a growing "willingness to transfer technology to private sector for various types of ballistic missiles", adding that "the time has come" to operationalise such plans, given their rising strategic importance in modern warfare.

"..I think that you will see steps being taken by the government to ensure that we have sufficient private sector involvement in that space as well," he said in response to queries from industry leaders, senior armed forces personnel, and other stakeholders at the Confederation of Indian Industry (CII) Annual Business Summit 2026.

The CII's special plenary session was themed 'Geo-strategy, Supply Chains and Strategic Resilience: The New Imperative'.

For the AMCA programme, three consortiums — two are a blend of private and public sectors and the third is entirely private — have been selected to build the fifth-generation aircraft on a design and prototype built by the Defence Research and Development Organisation , the Defence Secretary said.

Referring to the Defence Forces Vision 2047 document, released earlier, he said the defence ministry anticipates a 20 per cent year-on-year increase in the national defence budget over the next 21 years.

"We are targeting a defence production output of ₹8.8 lakh crore... we envision our defence exports reaching ₹2.8 lakh crore, placing India firmly among the top three global exporters of high-quality defence equipment," he observed.

**ACHIEVABLE TARGETS**

The Defence Forces Vision, encapsulated in the mantra 'Atmanirbhar, Agrani, and Atulya Bharat 2047' (self-reliant, leading, and incomparable India) sets a staggering but achievable economic targets for the defence sector, he said. In the past year and a half, ₹4.5 lakh crore worth of projects were given to the industry. Of that, 70 per cent in value and 90 per cent of the total contracts have gone to the indigenous industry, he said.


**STOVE KRAFT LIMITED**

Registered Office: #81, Harohalli Industrial Area, Kanakapura Taluk, Ramnagara District - 562112.
Corporate Office: No.30, 2nd Cross, CSI Compound, Mission Road, Bangalore - 560027
Ph.: 080 28016222 | Email: cs@stovekraft.com
Website: www.stovekraft.com
CIN No.: L29301KA1999PLC025387

STOVEKRAFT®

FY comparison

Revenue 16,074.24mn +10.87%
EBITDA 1,661.34mn +10.26%
PAT 419.91mn +9.05%

1. Key financial information

Rs. in Million, except per share data

| Sr. No | Particulars | Quarter Ended | | Year Ended | |
|---|---|---|---|---|---|
| | | 31st March 2026 | 31st March 2025 | 31st March 2026 | 31st March 2025 |
| | | Unaudited | Unaudited | Audited | Audited |
| 1 | Revenue from Operations | 4,145.23 | 3,129.92 | 16,074.24 | 14,498.17 |
| 2 | EBITDA* | 394.53 | 294.56 | 1,661.34 | 1,506.71 |
| 3 | Profit Before Tax | 50.76 | 10.88 | 509.83 | 487.88 |
| 4 | Profit After Tax for the period | 60.51 | 14.48 | 419.91 | 385.05 |
| 5 | Total Comprehensive Income for the period | 63.09 | 5.83 | 422.47 | 382.88 |
| 6 | Paid up Equity Share Capital (Face Value of Rs.10/- each) | 331.07 | 330.76 | 331.07 | 330.76 |
| 7 | Earnings per Share** Basic (in Rs.) (Face value of Rs. 10 each) | 1.83 | 0.44 | 12.69 | 11.65 |
| 8 | Earnings per Share** Diluted (in Rs.) (Face value of Rs. 10 each) | 1.83 | 0.44 | 12.69 | 11.64 |

"*Excludes Other Income and Other gains and losses.
**EPS is not annualised for the quarter and year ended March 31,2026 and for the quarter ended March 31,2025)."

| Sr. No | Particulars | As on | |
|---|---|---|---|
| | | 31st March 2026 | 31st March 2025 |
| | | Audited | Audited |
| 1 | Total Equity | 5042.42 | 4708.35 |
| 2 | Net Debt* | 0.00 | 1768.09 |

*Excludes lease liabilities and suppliers credit.

**Notes :**

- The statement of audited financial results for the quarter and the financial year ended March 31, 2026 were reviewed and recommended by the Audit Committee and approved by the Board of Directors at their respective meetings held on May 12,2026.
- The Financial Statements have been prepared in accordance with Indian Accounting Standards ("IndAS) prescribed by section 133 of the Companies Act 2013 and in terms of Regulation 33 of SEBI (Listing Obligations and Disclosure Requirements) Regulations, 2015
- The figures for the quarter ended March 31,2026 are the balancing figures between the audited figures in respect of the full financial year upto March 31,2026 and the unaudited published year to date upto December 31, 2025 being the date of the end of third quarter of the financial year, which were subject to limited review by statutory auidtors.
- The above is an extract of the detailed format of audited financial results filed with the stock exchanges under Regulation 33 of the SEBI (Listing Obligations and Disclosure Requirements) Regulations, 2015. The full format of the audited financial results are available on the Stock Exchange websites www.nseindia.com and www.bseindia.com and on the company's website www.stovekraft.com.

Date : 12/05/2026
Place : Bengaluru

For detailed results scan the QR Code

For & On Behalf of the Board
Rajendra Gandhi
Managing Director

